# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.53/2025

Pw-07

Cw-07

ಸಾಕ್ಷಿದಾರರ ಹೆಸರುಃ ಶ್ರೀ ಲಿಂಗರಾಜ ಗುಂಗರಗೊಪ್ಪ

ತಂದೆಃಗಂಡನ ಹೆಸರುಃ ಶ್ರೀ ಹೊನಕೇರಪ್ಪ

ವಯಸ್ಸುಃ 31 ವರ್ಷ

ಉದ್ಯೋಗಃ ಕೂಲಿ

ವಾಸ ಸ್ಥಳಃ ವೈ.ಟಿ ಹೊನ್ನತ್ತಿ, ತಾಃ ರಾಣೇಬೆನ್ನೂರು

**ದಿನಾಂಕ:17.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಈ ಕೇಸಿನ ಪಿರ್ಯಾದಿ ಮತ್ತು ಚಾಸಾ-4 ರಿಂದ 6 ಹಾಗೂ ಆರೋಪಿತರು ನನಗೆ ಗೊತ್ತು. ಅವರೆಲ್ಲರೂ ನಮ್ಮೂರಿನವರು. ಈಗ್ಗೆ 7-8 ತಿಂಗಳ ಹಿಂದೆ ನಮ್ಮ ಊರಿನಲ್ಲಿ ಗ್ರಾಮ ಪಂಚಾಯತಿ ಕಟ್ಟಡ ಕಟ್ಟುವ ಸಲುವಾಗಿ ಭೂಮಿ ಪೂಜೆಗಾಗಿ ಲೈನ್ ಔಟ್ ಹಾಕುವ ಕೆಲಸ ಇತ್ತು. ಆದ ಕಾರಣ ಅಲ್ಲಿಗೆ ಪಂಚಾಯತಿ ಪಿಡಿಓ, ಗುತ್ತಿಗೆದಾರರು ಮತ್ತು ಅಭಿಯಂತರರು ಅಲ್ಲಿಗೆ ಬಂದಿದ್ದರು. ಚಾಸಾ-1, 4 ಮತ್ತು 5 ರವರನ್ನು ಲೈನ್ ಔಟ್ ಹಾಕುವ ಕೆಲಸಕ್ಕೆ ಗುತ್ತಿಗೆದಾರರು ಕರೆಸಿಕೊಂಡಿದ್ದರು.

2. ಲೈನ್ ಔಟ್ ಹಾಕುವ ಕೆಲಸ ಮುಗಿದ ನಂತರ ಚಾಸಾ-1, 4 ಮತ್ತು 5 ರವರು ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಕಟ್ಟೆ ಮೇಲೆ ಕುಳಿತುಕೊಂಡಿದ್ದರು. ಆಗ ನಾನೂ ಸಹ ಪಂಚಾಯತಿ ಕಟ್ಟಡ ಕಟ್ಟುವ ಜಾಗದ ಹತ್ತಿರ ಇರುವ ಶಾಲೆ ಹತ್ತಿರ ಇದ್ದೆನು. ಆಗ 06 ಜನ ಆರೋಪಿತರು ಒಟ್ಟುಗೂಡಿ ಬಂದು ಚಾಸಾ-1, 4 ಮತ್ತು 5 ರವರಿಗೆ ನಿಮ್ಮದೇನಿದೆ ಮಿಂಡ್ರಿ ಮಕ್ಕಳಾ, ವಾಲ್ಮೀಕಿ ಹುಟ್ಟಿದ್ದವರು, ನಿವೇನು ನಮ್ಮಪ್ಪನಿಗೆ ಹುಟ್ಟಿದ್ದೀರಾ, ಇಲ್ಲಿ ಬಂದು ಏನು ಮಾಡುತ್ತೀದ್ದೀರಿ ಎಂದು ಅವಾಚ್ಯ ಶಬ್ದಗಳಿಂದ ಬೈದರು ಮತ್ತು ಕೈಗಳಿಂದ ಹೊಡಿ-ಬಡಿ

ಮಾಡಿದರು.

3. ಆಗ ನಾನು ಮತ್ತು ನಮ್ಮ ಮಾವ ಗುಡ್ಡಪ್ಪ ಬಂದು ಜಗಳ ಬಿಡಿಸಿದೆವು. ಆರೋಪಿತರು ಚಾಸಾ–1, 4 ಮತ್ತು 5ರವರಿಗೆ ನೀವು ಈ ಜಾಗಕ್ಕೆ ಬಂದರೆ ನಿಮ್ಮನ್ನು ಸಾಯಿಸುತ್ತೇವೆಂದು ಪ್ರಾಣ ಬೆದರಿಕೆ ಹಾಕಿದರು. ಘಟನೆಯಲ್ಲಿ ಚಾಸಾ–1, 4 ಮತ್ತು 5ರವರಿಗೆ ಗಾಯಗಳಾದವು. ಆಗ ನಾವು ಚಾಸಾ–1,4 ಮತ್ತು 5ರವರನ್ನು ಚಿಕಿತ್ಸೆಗಾಗಿ ರಾಣೇಬೆನ್ನೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಾನು ಪೊಲೀಸರ ಮುಂದೆ ಘಟನೆ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ.

**<u>ಪಾಟೀ ಸವಾಲುಃ 1 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಎನ್.ಜಿ.ಹೆಚ್ ವಕೀಲರಿಂದಃ</u>**

4. ನಾನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ನನ್ನ ವಯಸ್ಸನ್ನು ಹೇಳಿ ಬರೆಸಿರುತ್ತೇನೆ. ಸದರಿ ಹೇಳಿಕೆಯಲ್ಲಿ ನನ್ನ ವಯಸ್ಸನ್ನು 29 ವರ್ಷ ಎಂದು ಹೇಳಿ ಬರೆಸಿರುತ್ತೇನೆ. ಘಟನೆಯು ಮಧ್ಯಾಹ್ನ 2.00 ಗಂಟೆಗೆ ಆಗಿದೆ ಎಂದು ನಾನು ಪೊಲೀಸರ ಮುಂದೆ ಕೊಟ್ಟ ನನ್ನ ಹೇಳಿಕೆಯಲ್ಲಿ ಹೇಳಿ ಬರೆಸಿರುತ್ತೇನೆ. ಚಾಸಾ–1, 4 ಮತ್ತು 5ರವರಿಗೆ ಒಳಪೆಟ್ಟು ಆಗಿರುತ್ತವೆ.

5. ಘಟನಾ ಸ್ಥಳಕ್ಕೆ ಗುತ್ತಿಗೆದಾರರು ಮತ್ತು ಅಭಿಯಂತರರು ಮದ್ಯಾಹ್ನ 1.00 ಗಂಟೆಗೆ ಬಂದಿದ್ದರು. ನಂತರ MLAರವರು ಸ್ಥಳಕ್ಕೆ ಮಧ್ಯಾಹ್ನ 2.00 ಗಂಟೆಗೆ ಬಂದರು ಎಂದರೆ ನಿಜ. ಸದರಿ ಗ್ರಾಮ ಪಂಚಾಯತಿ ಕಟ್ಟಡ ಕಟ್ಟುವ ಜಾಗವನ್ನು ಸ್ವಚ್ಛಗೊಳಿಸಲು 01 ಗಂಟೆ ಸಮಯ ಹಿಡಿಯಿತು. ಸಾಕ್ಷಿಯು ಮುಂದುವರೆದು ಜಾಗವನ್ನು ಮೊದಲೇ ಸ್ವಚ್ಛಗೊಳಿಸಿದ್ದರು ಎಂದು ನುಡಿದಿರುತ್ತಾರೆ. ಸ್ಥಳದಲ್ಲಿ ಪೂಜೆ ಮಾಡಲು 01 ಗಂಟೆ ಸಮಯ ತೆಗೆದುಕೊಂಡಿತು. ಸ್ಥಳದಲ್ಲಿ ಟಿಫನ್ ವ್ಯವಸ್ಥೆ ಮಾಡಲಾಗಿತ್ತು ಎಂದರೆ ಸರಿಯಲ್ಲ. ಟಿಫನ್ ವ್ಯವಸ್ಥೆಯನ್ನು ಎಲ್ಲಿಯೂ ಸಹ ಮಾಡಿರಲಿಲ್ಲ.

6. ಜನಪ್ರತಿನಿಧಿಗಳು ಸ್ಥಳಕ್ಕೆ ಬಂದಾಗ ಅಂದಾಜು 70–80 ಜನ ಸೇರಿದ್ದರು. ಆರೋಪಿತರು ಬಿಜೆಪಿ ಪಕ್ಷದ ಕಾರ್ಯಕರ್ತರು ಎಂದರೆ ನಿಜ. ಹಾಲಿ ಜನಪ್ರತಿನಿಧಿಗಳು ಕಾಂಗ್ರೇಸ್ ಪಕ್ಷದಿಂದ ಗೆದ್ದು ಬಂದವರು ಎಂದರೆ ನಿಜ. ಸ್ಥಳದಲ್ಲಿ ಜನಪ್ರತಿನಿಧಿಗಳು ಮಧ್ಯಾಹ್ನ

2.30ರ ತನಕ ಇದ್ದರು. MLA ಬರುವುದಕ್ಕೆ ಮೊದಲೇ ಜಗಳ ಆಗಿತ್ತು. ಗುದ್ದಲಿ ಪೂಜೆ ಮಾಡದೇ ಲೈನ್ ಔಟ್ ಕೆಲಸ ಮಾಡಲು ಆಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಜಗಳವಾದಾಗ 50-60 ಜನ ಸೇರಿದ್ದರು. ಪಂಚಾಯತಿ ಕಟ್ಟಡ ಕಟ್ಟುವ ಜಾಗಕ್ಕೂ ಮತ್ತು ನಮ್ಮ ಮನೆಗೂ ಅಂದಾಜು 400 ಮೀಟರ್ ಅಂತರ ಇರುತ್ತದೆ. ಘಟನಾ ಸ್ಥಳಕ್ಕೂ ಚಾಸಾ-6 ರವರ ಮನೆಗೂ ಅಂದಾಜು 300 ಮೀಟರ್ ಅಂತರ ಇರುತ್ತದೆ.

7. ನನಗೆ ಜಮೀನು ಇರುವುದಿಲ್ಲ. ನಾನು ಕೂಲಿ ಕೆಲಸ ಮಾಡಿ ಜೀವನ ಮಾಡುತ್ತಿದ್ದೇನೆ. ಘಟನೆಯಾದ ದಿನಾಂಕ ನನಗೆ ನೆನಪಿಲ್ಲ. ಆದರೆ ಈಗ್ಗೆ ಅಂದಾಜು 7-8 ತಿಂಗಳ ಹಿಂದೆ ನಡೆದಿರುತ್ತದೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿದ ದಿನಾಂಕ ನನಗೆ ಈಗ ನೆನಪಿಲ್ಲ. ಪೊಲೀಸರು ನನ್ನ ಹೇಳಿಕೆಯಲ್ಲಿ ಏನು ಬರೆದುಕೊಂಡಿದ್ದಾರೆಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ.

8. ನಾನು ಕೋಳಿ ಫಾರಂ ಕೆಲಸ ಮತ್ತು ರೇಷ್ಮೆಗೆ ಸೊಪ್ಪು ಹಾಕುವ ಕೆಲಸಕ್ಕೆ ಹೋಗುತ್ತೇನೆ. ರೇಷ್ಮೆಗೆ ಸೊಪ್ಪು ಹಾಕುವ ಕೆಲಸಕ್ಕೆ ಬೆಳಿಗ್ಗೆ 5-6 ಗಂಟೆಗೆ ಹೋದರೆ ಬೆಳಿಗ್ಗೆ 11.00 ಗಂಟೆಯಾಗುತ್ತದೆ ಎಂದರೆ ನಿಜ. ನಂತರ ನಾನು ಕೋಳಿ ಫಾರಂ ಕೆಲಸಕ್ಕೆ ಹೋಗುತ್ತೇನೆ. ಕೋಳಿ ಫಾರಂ ಕೆಲಸಕ್ಕೆ ನಾನು ಬೆಳಿಗ್ಗೆ 10-10.30 ಗಂಟೆಗೆ ಹೋಗುತ್ತೇನೆ. ಸದರಿ ಕೋಳಿ ಫಾರಂ ನಲ್ಲಿ ಕೋಳಿ ಮಾಂಸವನ್ನು ಮಾರಾಟ ಮಾಡಲಾಗುತ್ತದೆ. ಸದರಿ ಕೋಳಿ ಫಾರಂ 07 ಗುಂಟೆ ಜಾಗದಲ್ಲಿರುತ್ತದೆ. ಸದರಿ ಕೋಳಿ ಫಾರಂ ನಲ್ಲಿ 5000 ಕೋಳಿಗಳು ಇರುತ್ತವೆ. ಕೋಳಿ ಫಾರಂ ನಲ್ಲಿ ಹಾಜರಿಪುಸ್ತಕವನ್ನು ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕೋಳಿ ಫಾರಂ ನಲ್ಲಿ ಇಬ್ಬರು ಕೂಲಿ ಕಾರ್ಮಿಕರಿದ್ದು, ಒಬ್ಬರು ಸೂಪರ್ ವೈಸರ್ ಇರುತ್ತಾರೆ. ನಾನು ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ವ್ಯವಸಾಯ ಮಾಡುತ್ತೇನೆಂದು ಹೇಳಿರುತ್ತೇನೆ.

9. ನಾನು ಘಟನಾ ಸ್ಥಳಕ್ಕೆ ಹೋದಾಗ ಮಧ್ಯಾಹ್ನ 2.00 ಗಂಟೆಯಾಗಿತ್ತು. ನಾನು ಘಟನಾ ಸ್ಥಳಕ್ಕೆ ಹೋಗಿ ಗಲಾಟೆ ನೋಡಿ ಜಗಳ ಬಿಡಿಸಿದ್ದೇನೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಪಿರ್ಯಾದಿಗೆ ಜಾತಿ ನಿಂದನೆ

ಮಾಡಿಲ್ಲ ಮತ್ತು ಹೊಡಿ–ಬಡಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಗುಡ್ಡಪ್ಪ ಹಾಗೂ ಇತರೆ ಜನರು ಚಾಸಾ–1, 4 ಮತ್ತು 5 ರವರನ್ನು ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತೇವೆ. ನಾವು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಮಧ್ಯಾಹ್ನ 1.30 ಗಂಟೆಯಾಗಿರಬಹುದು. ನಾನು ಚಾಸಾ–1, 4 ಮತ್ತು 5 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು ಕಾಂಗ್ರೇಸ್ ಪಕ್ಷದ ಕಾರ್ಯಕರ್ತರಾಗಿರುವ ಕಾರಣ ಬಿಜೆಪಿ ಕಾರ್ಯಕರ್ತರಾಗಿರುವ ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.